ಸಿ ಸಿ ಸಂಖ್ಯೆ 121/2018

ಪಿ ಡಬ್ಲ್ಯೂ-2

**(ದಿನಾಂಕ 04.03.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.)**

**ಪಾಟೀ ಸವಾಲು 1ನೇ ಆರೋಪಿ ಪರ ವಕೀಲರಿಂದಃ-**

2ನೇ ಆರೋಪಿ ನನ್ನ ಅಕ್ಕ ಎಂದರೆ ಸರಿ. 1ನೇ ಆರೋಪಿ ನನ್ನ ಅಣ್ಣ ಎಂದರೆ ಚಿಕ್ಕಪ್ಪನ ಮಗ. ತಾವರ್ಯಾ ನಾಯ್ಕನಿಗೆ 3 ಜನ ಮಕ್ಕಳು. ಸಕ್ರನಾಯ್ಕ, ವೀರ್ಯಾನಾಯ್ಕ ಮತ್ತು ಚಂದ್ರಿಬಾಯಿ ಮಕ್ಕಳು. ನಮ್ಮ ತಂದೆಗೆ ಗಂಡು ಸಂತಾನ ಇಲ್ಲಾ ಎಂದರೆ ಸರಿ. ಹೀಗಾಗಿ ಉಮಾ ನಾಯ್ಕನನ್ನು ನಮ್ಮ ತಂದೆ ದತ್ತು ತೆಗೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಿಚಾರ ಗೊತ್ತಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ಯಾವಾಗ ಮರಣ ಹೊಂದಿರುತ್ತಾರೆ ಗೊತ್ತಿಲ್ಲಾ. ತಾಯಿ ಯಾವಾಗ ಮರಣ ಹೊಂದಿರುತ್ತಾರೆ ನನಗೆ ಗೊತ್ತಿಲ್ಲಾ. ನನ್ನ ತಂದೆ ತಾಯಿ ಮರಣ ಹೊಂದುವುದಕ್ಕಿಂತ ಮುಂಚೆ ನಮ್ಮ ಅಕ್ಕ ಚಂದ್ರಿಬಾಯಿ ಮದುವೆ ಆಗಿತ್ತು ಎಂದರೆ ಸರಿ. ತಂದ ತಾಯಿ ತೀರಿದಾಗ ನಾನು ಚಿಕ್ಕವಳಿದ್ದೆ ಎಂದರೆ ಸರಿ. ಪಾಲನೆ ಪೋಷಣೆ ಉಮಾನಾಯ್ಕ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ವಿವಾಹವನ್ನು ಕೂಡ ಉಮಾನಾಯ್ಕ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ತಂದೆಯ ಹೆಸರಿನಲ್ಲಿ ಇದ್ದ ಎಲ್ಲಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಎಂದರೆ ಅದು ಖರೀದಿಸಿದ ಆಸ್ತಿಗಳು. ನನ್ನ ತಂದೆ ಮತ್ತು ಚಂದ್ರಿಬಾಯಿ ಸಕ್ರನಾಯ್ಕ ಒಟ್ಟು ಕುಟುಂಬದಲ್ಲಿ ವಾಸವಾಗಿದ್ದರು ಎಂದರೆ ಸರಿಯಲ್ಲ. ಒಟ್ಟಿಗೆ ದುಡಿಮೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ತಾವರ್ಯಾ ನಾಯ್ಕ ಮೃತ ಹೊಂದಿದ ನಂತರ ವೀರ್ಯಾನಾಯ್ಕ ಒಟ್ಟು ಕುಟುಂಬದ ವ್ಯವಹಾರ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ನಮ್ಮ ತಂದೆ ತಾಯಿ ಎಲ್ಲಾ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ನಾನು 1ನೇ ಆರೋಪಿಯ ವಿರುದ್ದ ಓ ಎಸ್ ನಂಬರ 221/2014 ದಾಖಲಿಸಿದ್ದೆ ಎಂದರೆ ಸರಿ. ಸದರಿ

ದಾವೆ ಆಸ್ತಿಯ ಖಾತೆ ಪಹಣಿ ಏಕೆ ನನ್ನ ಹೆಸರಿಗೆ ಮಾಡಿಸಿಕೊಳ್ಳಲಿಲ್ಲ ಎಂದರೆ ಉಮಾನಾಯ್ಕ ತನ್ನ ಹೆಸರಿಗೆ ಮಾಡಿಸಿಕೊಂಡಿದ್ದರು. ಓ ಎಸ್ ನಂಬರ 221/2014 ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಮೇಲ್ಮನವಿಯನ್ನು ಪ್ರಶ್ನಿಸಿ 1ನೇ ಆರೋಪಿ ಗೌರವಾನ್ವಿತ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಓ ಎಸ್ ನಂಬರ 221/2014 ನಡೆಯುತ್ತಿರುವಾಗ ನನ್ನ ಹಸೆರಿಗೆ ಆಸ್ತಿ ಖಾತೆ ಬದಲಾವಣೆ ಮಾಡಿಸಿಕೊಂಡೆ ಎಂದರೆ ಸರಿ. ಓ ಎಸ್ ನಂಬರ 221/2014 ರಲ್ಲಿ ಇರುವ ಸಂಗತಿಗಳನ್ನು ಮರೆ ಮಾಚಿ ಈ ಸುಳ್ಳು ದೂರನ್ನು ಕೊಟ್ಟಿರುತ್ತೇನೆ ಎಂದರೆ ನನಗೆ ಗೊತ್ತಾಗುವುದಿಲ್ಲ.

ಮರು ವಿಚಾರಣೆ ಇಲ್ಲ:-

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಗಣಕೀಕೃತ ಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ

ನ್ಯಾಯಾಧೀಶರು, ಹರಪನಹಳ್ಳಿ.

ಸಿ ಸಿ ಸಂಖ್ಯೆ 121/2018

ಪಿ ಡಬ್ಲ್ಯೂ-5

**(ದಿನಾಂಕ 04.03.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.)**

**ಪಾಟೀ ಸವಾಲು 1ನೇ ಆರೋಪಿ ಪರ ವಕೀಲರಿಂದಃ-**

ಆರೋಪಿ ಪರ ವಕೀಲರು ಪಾಟೀ ಸವಾಲು ಮುಂದಾಗದ ಕಾರಣ ಪಾಟೀ ಸವಾಲು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ ಇಲ್ಲಾಃ-

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಗಣಕೀಕೃತ ಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಹರಪನಹಳ್ಳಿ.

ಸಿ ಸಿ ಸಂಖ್ಯೆ 121/2018

ಪಿ ಡಬ್ಲ್ಯೂ-6

**(ದಿನಾಂಕ 04.03.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.)**

**ಪಾಟೀ ಸವಾಲು 1ನೇ ಆರೋಪಿ ಪರ ವಕೀಲರಿಂದಃ-**

ಆರೋಪಿ ಪರ ವಕೀಲರು ಪಾಟೀ ಸವಾಲು ಮುಂದಾಗದ ಕಾರಣ ಪಾಟೀ ಸವಾಲು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ ಇಲ್ಲಾಃ-

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಗಣಕೀಕೃತ ಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ

ನ್ಯಾಯಾಧೀಶರು, ಹರಪನಹಳ್ಳಿ.